**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ**

ಸಿ ಸಿ ನಂಬರ :213/2023

CW-1 PW-4

ಹೆಸರು : ಗಂಗಾಧರ ಬಡಿಗೇರ
ತಂದೆಯ ಹೆಸರು : ಬೀಮಣ್ಣ
ವಯಸ್ಸು : 34 ವರ್ಷ
ಉದ್ಯೋಗ : ಅಬಕಾರಿ ನಿರೀಕ್ಷಕರು, ಸಿಂದನೂರು ವಲಯ
ವಾಸಸ್ಥಳ : ಸಿಂದನೂರು

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 12–05–2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ದಿಃ 24.11.2020 ರಿಂದ 23.09.2024 ರ ವರೆಗೆ ಅಬಕಾರಿ ನಿರೀಕ್ಷಕರು ಅಂತಾ ರೋಣ ವಲಯ ದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 21.11.2022 ರಂದು ಬೆಳಿಗ್ಗೆ 09.30 ಗಂಟೆ ಸುಮಾರಿಗೆ ರೋಣ ವಲಯದ ಬೇವಿನಕಟ್ಟಿ ಗ್ರಾಮದಲ್ಲಿ ನಾನು, ಚಾಸಾ-5 ಮತ್ತು ವಾಹನ ಚಾಲಕ ಖಾಜವಲಿ ನದಫ ರವರು ಗಸ್ತು ಕರ್ತವ್ಯದಲ್ಲಿ ಇದ್ದಾಗ ನನಗೆ ರುದ್ರಾಪೂರದ ಗ್ರಾಮದ ತುಕ್ಕಪ್ಪ ಚಂದ್ರುಪ್ಪ ರಾಠೋಡ ತನ್ನ ವಾಸದ ಮನೆಯಲ್ಲಿ ಅಕ್ರಮವಾಗಿ ಕಳ್ಳಬಟ್ಟಿ ಸಾರಾಯಿ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ನನಗೆ ಮಾಹಿತಿ ಬಂದಿದ್ದು, ನಂತರ ಬೇವಿನಕಟ್ಟಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಹೋಗಿ ಇಬ್ಬರು ಪಂಚರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಬೆಳಿಗ್ಗೆ 10.00 ಗಂಟೆ ಸುಮಾರಿಗೆ ಹೋಗಿ ಮನೆಯನ್ನು ಶೋಧಿಸುವ ಪೂರ್ವದಲ್ಲಿ ಪಂಚರ ಸಮಕ್ಷಮ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಮನೆಯನ್ನು ಪ್ರವೇಶಿಸಲಾಗಿ ಮನೆಯ ಎಡಭಾಗದ ಒಂದು ಮೂಲೆಯಲ್ಲಿ 1 ಪ್ಲಾಸ್ಟಿಕ್ ಬಾಟಲ್ ಇದ್ದು ಅದರ ಬಿಚ್ಚಿ ನೋಡಲಾಗಿ ಉಪ್ಪು ಘಾಟು ವಾಸನೆ ದ್ರವ ಇರುವುದು ಕಂಡುಬಂದಿದ್ದು, ಅದು ಕಳ್ಳಬಟ್ಟಿ ಸಾರಾಯಿ ಎಂದು ಖಚಿತಪಡಿಸಿಕೊಂಡು ಅದು ಅಂದಾಜು ಒಂದೂವರೆ ದ್ರವ ಇದ್ದು ನಂತರ ಮನೆಯಲ್ಲಿದ್ದ ವ್ಯಕ್ತಿಯನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ತುಕ್ಕಪ್ಪ ಊರ್ಫ ತಂದೆ ಚಂದಪ್ಪ ರಾಠೋಡ ತಿಳಿಸಿದರು. ಸದರಿ ಕಳ್ಳಬಟ್ಟಿ ಸಾರಾಯಿಯನ್ನು ಮಾರಾಟದ ಉದ್ದೇಶಕ್ಕಾಗಿ ಸಂಗ್ರಹಿಸಿ ಇಟ್ಟಿರುವುದಾಗಿ ತಿಳಿಸಿರುತ್ತಾನೆ. ನಂತರ ಜಪ್ತುಪಡಿಸಿಕೊಂಡ ಎಲ್ಲಾ ಮು.ಮಾ. ಅನ್ನು ಅದೇ ಬಾಟಲ್ ನಲ್ಲಿ ರಾಸಾಯನಿಕ ಪರೀಕ್ಷೆಗೆ ಮಾದರಿಗೆ ಎಂದು ತೆಗೆದು ಸದರಿ ಬಾಟಲ್ ಅನ್ನು ಬಿಳಿ ಬಟ್ಟೆಯಿಂದ ಕಟ್ಟಿ ಅರಗಿನಿಂದ ಸೀಲ ಮಾಡಲಾಯಿತು. ಸ್ಥಳದಲ್ಲಿ ಮಾದರಿ ಸೀಲ ಪತ್ರ ತಯಾರಿಸಿಲಾಯಿತು. ಸ್ಯಾಂಪಲ್ ಚೀಟಿಯನ್ನು ತಯಾರಿಸಿ ನನ್ನ ಮತ್ತು ಪಂಚರ ಸಹಿ ಮಾಡಿಸಿ ಮಾದರಿಗೆ ಅಂಟಿಸಲಾಯಿತು. ಪಂಚನಾಮೆಯನ್ನು ಪಂಚರ ಸಮಕ್ಷಮ ಮುಂಜಾನೆ 10.00 ರಿಂದ 11.00 ಗಂಟೆಯವರೆಗೆ ಬರೆಯಲಾಯಿತು. ನಂತರ ನಾನು ಆರೋಪಿ ಮತ್ತು ಮು.ಮಾ ನೊಂದಿಗೆ ಠಾಣೆಗೆ ಹಾಜರಾಗಿ ದೂರು ಮತ್ತು ಪ್ರ.ವ.ವ ತಯಾರಿಸಿ ದಸ್ತಗಿರಿ ನಿಯಮ ಪಾಲಿಸಿ ನ್ಯಾಯಾಂಗ ಬಂಧನಕ್ಕಾಗಿ ಆರೋಪಿತನನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.1 ರವರಿಗೆ ಹಸ್ತಾಂತರಿಸಿದ್ದೇನೆ.

ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರು ಇರುವ 1 ನೇ ಆರೋಪಿತನನ್ನು ನೋಡಿ ಗುರುತಿಸಿರುವರು. ಸಾಕ್ಷಿಯು 1 ಹಸಿರು ಬಣ್ಣದ 2 ಲೀ ಸಾಮರ್ಥ್ಯದ ಪ್ಲಾಸ್ಟಿಕ್ ಬಾಟಲ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ. ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಶೋಧನಾ ಸಮುಚಿತ ಆಧಾರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸೀಲ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2 ಸಿ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದಃ ಶ್ರೀ. ಆರ್.ಎಸ್.ಎಮ್.</u>**

ದಿಃ 21.11.2022 ರಂದು ನನಗೆ ಯಾವುದೇ ಮಾಹಿತಿ ಬಂದಿಲ್ಲ, ಪಂಚರ ಸಮಕ್ಷಮ ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಮು.ಮಾ ನ್ನು ಜಪ್ತುಪಡಿಸಿಕೊಂಡು ಪಂಚನಾಮೆ ಮಾಡಿದ್ದೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ರೈಡ ಮಾಡದೇ ಇದ್ದರೂ ಠಾಣಾ ಅಂಕೆ-ಸಂಖ್ಯೆಗೊಸ್ಕರ ಮೇಲಾಧಿಕಾರಿಗಳ ಮಾತು ಕೇಳಿ ಖೊಟ್ಟಿ ದೂರು ನೀಡಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ ರಂತಹ ಟೆಟ್ರಾ ಪಾಕೆಟಗಳು ಹೊರಗಡೆ ಸಿಗುತ್ತದೆ ಎಂದರೆ ಸರಿ.

**ಮರುವಿಚಾರಣೆ ಇಲ್ಲಃ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ. ಡಿ )
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.